**ಕರ್ನಾಟಕ ಸರ್ಕಾರ**
**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್ಐಸಿಪಿಎಸ್/ಕೋವಿಡ್-19/70/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:09.05.2020

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಮುಂಬೈ ನಗರದ ಆರ್ಥರ್ ರಸ್ತೆ ಜೈಲಿನಲ್ಲಿ 70ಕ್ಕೂ ಮೇಲ್ಪಟ್ಟು ನಿವಾಸಿಗಳಿಗೆ ಹಾಗೂ 25ಕ್ಕೂ ಮೇಲ್ಪಟ್ಟು ಸಿಬ್ಬಂದಿಗಳಿಗೆ ಕೋವಿಡ್-19 ಪಾಸಟೀವ್ ವರದಿ ಬಂದಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುವ ಹಿನ್ನೆಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹೆಚ್ಚಿನ ಕಾಳಜಿ ವಹಿಸುವ ಬಗ್ಗೆ.

ಉಲ್ಲೇಖ:
1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ.1/2020 ದಿನಾಂಕ:23.03.2020
2) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ.4/2020 ದಿನಾಂಕ:03.04.2020
3) ಕೇಂದ್ರ ಕಛೇರಿಯಿಂದ ಹೊರಡಿಸಿರುವ ಹಲವಾರು ಪತ್ರಗಳು.
4) ಈ ಕಛೇರಿ ಪತ್ರ ಸಂ.ಕೆಎಸ್ಐಸಿಪಿಎಸ್/ಕೋವಿಡ್-19 2020-21 ದಿನಾಂಕ:10.04.2020
5) ಸರ್ಕಾರದ ಪತ್ರ ಸಂ.ಕೆಎಸ್ಐಸಿಪಿಎಸ್/ಕೋವಿಡ್-19/58/ 2020-21 ದಿನಾಂಕ:27.04.2020

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ ಹಾಗೂ ಅದರನ್ವಯ ಕೇಂದ್ರ ಕಛೇರಿಯಿಂದ ಹೊರಡಿಸಲಾದ ಹಲವಾರು ಪತ್ರಗಳಂತೆ ಈಗಾಗಲೇ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್-19ಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುತ್ತಿರುವುದು ಸರಿಯಷ್ಟೆ.

ಅಲ್ಲದೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಒಂದೇ ವಾಹನ ಲಭ್ಯವಿರುವುದರಿಂದ ಹಾಗೂ ಹಲವಾರು ಕಡೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಕೋವಿಡ್-19 ಗೆ ಸಂಬಂಧಪಟ್ಟ ತುರ್ತು ಕೆಲಸಗಳನ್ನು ವಹಿಸಿರುವುದರಿಂದ ಜಿಲ್ಲೆಯಾದ್ಯಂತ ಇರುವ ಮಕ್ಕಳ ಪಾಲನಾ ಸಂಸ್ಥೆಗಳನ್ನು ಮೇಲ್ವಿಚಾರಣೆ ಮಾಡಲು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಅವರ ಅಧಿಕಾರ ವ್ಯಾಪ್ತಿಯ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡುವಂತೆ ನಿರ್ದೇಶಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಉಲ್ಲೇಖ(4)& (5)ರ ಪತ್ರಗಳನ್ನು ಬರೆದಿರುವುದು ವಾಸ್ತವಾಂಶವಾಗಿರುತ್ತದೆ.

ಕೆಲವು ದಿನಗಳ ಹಿಂದೆ ಮುಂಬೈನಗರದ ಆರ್ಥರ್ ರಸ್ತೆ ಜೈಲಿನಲ್ಲಿ 70ಕ್ಕೂ ಮೇಲ್ಪಟ್ಟು ನಿವಾಸಿಗಳಿಗೆ ಹಾಗೂ 25ಕ್ಕೂ ಮೇಲ್ಪಟ್ಟು ಸಿಬ್ಬಂದಿಗಳಿಗೆ ಕೋವಿಡ್-19 ಪಾಸಟೀವ್ ವರದಿ ಬಂದಿರುವುದಾಗಿ ಎಲ್ಲಾ ಮಾಧ್ಯಮಗಳ ಮುಖಾಂತರ ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಹೆಚ್ಚಿನ ಕಾಳಜಿ ಮತ್ತು ಹೆಚ್ಚಿನ ವೈಯಕ್ತಿಕ ಗಮನ, ನಿರಂತರ ಮೇಲ್ವಿಚಾರಣೆ, ನಿರಂತರ ನಿಗಾವಹಿಸುವುದು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೆಳಕಂಡ ಅಂಶಗಳು ಅನುಪಾಲನೆಯಾಗುತ್ತಿರುವ ಬಗ್ಗೆ ನಿಮ್ಮ ಅಧೀನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನಿರಂತರ ಮೇಲ್ವಿಚಾರಣೆ ಮಾಡುವಂತೆ ಆದೇಶಿಸಲು ಈ ಮೂಲಕ ತಿಳಿಸಿದೆ.

1) ಸಾಮಾಜಿಕ ಅಂತರ ಕಾಪಾಡುತ್ತಿರುವ ಬಗ್ಗೆ.
2) ಪರ್ಸನಲ್ ಪ್ರೊಟೆಕ್ಷನ್ ಎಕ್ವ್ಯುಪ್‌ಮೆಂಟ್ ಬಳಸುತ್ತಿರುವ ಬಗ್ಗೆ ಹಾಗೂ ಸಾಕಷ್ಟು ದಾಸ್ತಾನು ನಿರ್ವಹಿಸುತ್ತಿರುವ ಬಗ್ಗೆ.
3) ಒಂದೇ ಆವರಣದಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳ ಪಾಲನಾ ಸಂಸ್ಥೆಗಳಿದ್ದಲ್ಲಿ, ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಯಲ್ಲಿ, ಸದರಿ ಸಂಸ್ಥೆಗೆ ಮಾತ್ರ ಸೀಮಿತವಾಗಿ, ಪ್ರತ್ಯೇಕವಾಗಿ ಇನ್ಫ್ರಾರೆಡ್ ಡಿಜಿಟಲ್ ನಾನ್‌ಕಾಂಟ್ಯಾಕ್ಟ್ ಥರ್ಮಾಮೀಟರ್ ಉಪಕರಣವನ್ನು ಬಳಸುತ್ತಿರುವ ಬಗ್ಗೆ.
4) ದಿನನಿತ್ಯ ಮಕ್ಕಳ ತಾಪಮಾನವನ್ನು ಪರೀಕ್ಷಿಸುತ್ತಿರುವುದು ಹಾಗೂ ಅದನ್ನು ನಿಗದಿತ ರಿಜಿಸ್ಟರ್‌ನಲ್ಲಿ ಪ್ರತೀ ಮಗುವಿನ ತಾಪಮಾನವನ್ನು ನಿರ್ವಹಿಸುತ್ತಿರುವ ಬಗ್ಗೆ
5) ಮಕ್ಕಳ ಪಾಲನಾ ಸಂಸ್ಥೆಯ ಪ್ರವೇಶ ದ್ವಾರದಲ್ಲಿ ಸಂಸ್ಥೆಗೆ ಬರುವ ಮತ್ತು ಹೊರಹೋಗುವವರ ಬಗ್ಗೆ ಕಠಿಣ ನಿಯಂತ್ರಣ ಕಾಪಾಡುತ್ತಿರುವ ಬಗ್ಗೆ.
6) ಮಕ್ಕಳ ಪಾಲನಾ ಸಂಸ್ಥೆಯ ಪ್ರವೇಶದ್ವಾರದಲ್ಲಿ ಸಂಸ್ಥೆಯ ಒಳಗೆ ಪ್ರವೇಶಿಸುವ ಪ್ರತಿಯೊಬ್ಬರಿಗೂ ಕೈಗಳಿಗೆ ಸ್ಯಾನಿಟೈಟರ್ ಹಚ್ಚಿಕೊಳ್ಳುವುದು ಮತ್ತು ಕಾಲುಗಳಿಗೆ ಸ್ಯಾನಿಟೈಜರ್ ಸ್ಪ್ರೇ ಮಾಡಿಕೊಳ್ಳುವುದು ಹಾಗೂ ತಾಪಮಾನ ಪರೀಕ್ಷಿಸಿ ನಂತರ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಬಗ್ಗೆ.
7) ಮಕ್ಕಳ ಪಾಲನಾ ಸಂಸ್ಥೆಗಳಿಗೆ ಮೇಲ್ವಿಚಾರಣೆಗಾಗಿ ಬರುವ ಯಾವುದೇ ಮಟ್ಟದ ತನಿಖಾಧಿಕಾರಿಗಳಿಗೂ ಸಹ ಮೇಲಿನಂತೆ ಪ್ರವೇಶದ್ವಾರದಲ್ಲಿ ಕೋವಿಡ್-19ಗೆ ನಿಗದಿಪಡಿಸಿದ ಮುನ್ನೆಚ್ಚರಿಕಾ ಕ್ರಮಗಳ ಪ್ರೊಟೋಕಾಲನ್ನು ಕಡ್ಡಾಯವಾಗಿ ಅನುಸರಿಸುತ್ತಿರುವ ಬಗ್ಗೆ.
8) ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ನಿವಾಸಿಗಳು ಅಥವಾ ಅಧಿಕಾರಿ ಸಿಬ್ಬಂದಿಗಳಾಗಲೀ ಅಥವಾ ಹೊರಗಿನಿಂದ ಬರುವ ಮತ್ತು ಹೋಗುವವರಾಗಲಿ ಅವರು ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳನ್ನು ಅಚ್ಚುಕಟ್ಟಾಗಿ ಅನುಪಾಲನೆ ಮಾಡುತ್ತಿರುವ ಬಗ್ಗೆ
9) ದಿನನಿತ್ಯ ಸ್ವೀಕರಿಸುವ ಹಾಲಿನ ಪ್ಯಾಕೆಟ್, ಹಣ್ಣು ಮತ್ತು ತರಕಾರಿ ಇತ್ಯಾದಿಗಳನ್ನು ಸರಿಯಾಗಿ ಶುಚಿಗೊಳಿಸುತ್ತಿರುವ ಬಗ್ಗೆ ಹಾಗೂ ಆಹಾರ ದಾಸ್ತಾನುಗಳನ್ನು ಸಂಸ್ಥೆಯ ಒಳಗೆ ಸ್ವೀಕರಿಸುವ ಪೂರ್ವದಲ್ಲಿ ಅವುಗಳ ಕವರ್‌ಗಳನ್ನು ಸರಿಯಾಗಿ ಡಿಸ್ ಇನ್‌ಫೆಕ್ಟೆಂಟ್ ಮಾಡುತ್ತಿರುವ ಬಗ್ಗೆ.
10) ಯಾವುದೇ ಹೊಸ ದಾಖಲಾತಿ ಮಗುವನ್ನು ಕಡ್ಡಾಯವಾಗಿ ಅವಶ್ಯಕ ಸಮಯಕ್ಕೆ ಕ್ವಾರಂಟೈನ್ ಮಾಡುತ್ತಿರುವ ಬಗ್ಗೆ.
11) ನಿಯಮಿತವಾಗಿ ಆರೋಗ್ಯ ತಪಾಸಣೆ, ಫಿಮಿಗೇಷನ್, ಕೋವಿಡ್-19 ಬಗ್ಗೆ ಅರಿವು, ಕೌನ್ಸಿಲಿಂಗ್ ಸೆಷನ್ಸ್ ಇತ್ಯಾದಿ ನಡೆಸುತ್ತಿರುವ ಬಗ್ಗೆ.
12) ಮನೆಗೆ ಕಳುಹಿಸಿದ ಮಕ್ಕಳನ್ನು ನಿಯಮಿತವಾಗಿ ಫಾಲೋಅಪ್ ಮಾಡುತ್ತಿರುವ ಬಗ್ಗೆ.

13) ಭವಿಷ್ಯದಲ್ಲಿ ಬರಬಹುದಾದ ಹೊಸದಾಖಲಾತಿ ಮಕ್ಕಳಿಗೆ ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ಕ್ವಾರಂಟೈನ್ ವ್ಯವಸ್ಥೆ ಮಾಡಿಕೊಂಡಿರುವುದರ ಬಗ್ಗೆ.

14) ಭವಿಷ್ಯದಲ್ಲಿ ಬರಬಹುದಾದ ಯಾವುದೇ ಒಂದು ಕಾರಣಕ್ಕೆ ಅಂದರೆ ಸಿಬ್ಬಂದಿಯವರು ಮಗುವಿನೊಡನೆ ಆಸ್ಪತ್ರೆಯಲ್ಲಿ ಹೆಚ್ಚುವರಿ ಕೆಲಸ ನಿರ್ವಹಿಸಬೇಕಾದಲ್ಲಿ, ಸಿಬ್ಬಂದಿಗಳೇ ಸ್ವತ: ಆರೋಗ್ಯ ಸಮಸ್ಯೆಗೆ ತುತ್ತಾಗಿ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗದ ಪಕ್ಷದಲ್ಲಿ, ಈ ರೀತಿ ಅವಶ್ಯಕ ಸಂದರ್ಭಗಳಿಗೆ ಪರ್ಯಾಯ ಹಾಗೂ ಹೆಚ್ಚುವರಿ ಸಿಬ್ಬಂದಿ ಪಟ್ಟಿ ಸಿದ್ಧಪಡಿಸಿ ಇಟ್ಟುಕೊಂಡಿರುವ ಬಗ್ಗೆ.

15) ರೆಡಿ ರೆಫರೆನ್ಸ್ ಡೈರೆಕ್ಟರಿಯನ್ನು ನಿರ್ವಹಿಸುತ್ತಿರುವ ಬಗ್ಗೆ

16) ಮಕ್ಕಳನ್ನು ಸಕಾರಾತ್ಮಕ ಮತ್ತು ಸಕ್ರಿಯವಾಗಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿರುವ ಬಗ್ಗೆ.

17) ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಮತ್ತು ಮನೆಗೆ ಕಳುಹಿಸಿದ ಮಕ್ಕಳಿಗೆ ಕೌನ್ಸಿಲಿಂಗ್ ಸೌಲಭ್ಯ ನಿರಂತರವಾಗಿ ದೊರೆಯುವಂತೆ ಕೈಗೊಂಡಿರುವ ಕ್ರಮದ ಬಗ್ಗೆ.

18) ದಿನನಿತ್ಯ ಮಕ್ಕಳ ಪಾಲನಾ ಸಂಸ್ಥೆಗಳ ಕಸ ವಿಲೇವಾರಿಯಾಗುತ್ತಿರುವ ಬಗ್ಗೆ ಮತ್ತು ಸಂಸ್ಥೆಯ ಸಂಪೂರ್ಣ ಆವರಣದಲ್ಲಿ ನೈರ್ಮಲ್ಯತೆ ಕಾಪಾಡುತ್ತಿರುವ ಬಗ್ಗೆ.

ಮೇಲಿನಂತೆ ಹಾಗೂ ಮತ್ತಾವುದಾದರೂ ಕೋವಿಡ್-19ಗೆ ಸಂಬಂಧಪಟ್ಟ ಮುನ್ನೆಚ್ಚರಿಕಾ ಕ್ರಮಗಳನ್ನು ಅಚ್ಚುಕಟ್ಟಾಗಿ ಅನುಪಾಲನೆ ಮಾಡುತ್ತಿರುವ ಬಗ್ಗೆ ನಿಮ್ಮ ಅಧೀನದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಅವರ ಅಧಿಕಾರ ವ್ಯಾಪ್ತಿಗೆ ಬರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳು ಅಚ್ಚುಕಟ್ಟಾಗಿ ಅನುಪಾಲನೆಯಾಗುತ್ತಿರುವ ಬಗ್ಗೆ ಆಗಿಂದಾಗ್ಗೆ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ಮಾಡಿ ಆಗಿಂದಾಗ್ಗೆ ನಿಯಮಿತವಾಗಿ ಫಾಲೋಅಪ್ ಮಾಡುವಂತೆ ಸೂಚಿಸಲು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

09.05.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರಿಗೆ ಗೌರವದೊಂದಿಗೆ ಸಲ್ಲಿಸಿದೆ.
2) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, 30 ಜಿಲ್ಲೆಗಳು.
4) ಹೆಚ್ಚುವರಿ ಪ್ರತಿ.

REDMI NOTE 8
AI QUAD CAMERA